ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: OSM

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 18/12/19

## ಹಗ್ಗದ ತುದಿಗೆ ಪಾಕ್ ಮಾಜಿ ಸರ್ವಾಧಿಕಾರಿ ಬದುಕು

# ಮುಷರಫ್‌ಗೆ ಗಲ್ಲು ಶಿಕ್ಷೆ

ಇಸ್ಲಾಮಾಬಾದ್: ಕಾರ್ಗಿಲ್ ಯುದ್ಧದ ರೂವಾರಿ, ಸರ್ವಾಧಿಕಾರಿಯಾಗಿ ಸೇನೆ, ಸರ್ಕಾರವನ್ನು ಕಿರು ಬೆರಳಲ್ಲಿ ತಿರುಗಿಸುತ್ತಲೇ ದಶಕಗಳವರೆಗೆ ಪಾಕಿಸ್ತಾನವನ್ನು ಆಳಿದ ಮಾಜಿ ಅಧ್ಯಕ್ಷ ಜನರಲ್ ಪರ್ವೇಜ್ ಮುಷರಫ್‌ಗೆ ಪಾಕಿಸ್ತಾನದ ವಿಶೇಷ ನ್ಯಾಯಾಲಯ ದೇಶದ್ರೋಹ ಆರೋಪದ ಮೇಲೆ ಗಲ್ಲು ಶಿಕ್ಷೆ ವಿಧಿಸಿದೆ. 2013ರಿಂದಲೂ ಬಾಕಿಯಿದ್ದ ಪ್ರಕರಣದ ವಿಚಾರಣೆ ಕಾಯ್ದಿರಿಸಿದ್ದ ಮೂವರು ಸದಸ್ಯರನ್ನೊಳಗೊಂಡ ನ್ಯಾಯಾಲಯ ಮಂಗಳವಾರ ಈ ಐತಿಹಾಸಿಕ ತೀರ್ಪು ನೀಡಿದೆ. ಮುಷರಫ್ ಸಂವಿಧಾನವನ್ನು ಕಡೆಗಣಿಸಿದ್ದಕ್ಕಾಗಿ ವಿಚಾರಣೆ ಎದುರಿಸಿದ ಪಾಕಿಸ್ತಾನದ ಪ್ರಪ್ರಥಮ ಮಿಲಿಟರಿ ಅಧಿಕಾರಿಯಾಗಿದ್ದಾರೆ. 1999ರಲ್ಲಿ ಸೇನಾ ಕ್ರಾಂತಿ ಮೂಲಕ ಅಧಿಕಾರದ ಗದ್ದುಗೆ ಹಿಡಿದ ಮುಷರಫ್ 2001ರಿಂದ 2008ರವರೆಗೆ ಪಾಕ್‌ನ ಅಧ್ಯಕ್ಷರಾಗಿದ್ದರು. 2016ರಿಂದ ದುಬೈನಲ್ಲಿರುವ ಅವರು ಸದ್ಯ ಅನಾರೋಗ್ಯ ಕಾರಣದಿಂದ ಅಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ತಿಂಗಳ ಆರಂಭದಲ್ಲಿ ಆಸ್ಪತ್ರೆ ಹಾಸಿಗೆಯಿಂದಲೇ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿದ್ದ ಮುಷರಫ್, ತನ್ನ ವಿರುದ್ಧದ ಆರೋಪ ನಿರಾಧಾರವಾದುದೆಂದಿದ್ದರು.

» **ವಿಶೇಷ ಕೋರ್ಟ್‌ನಿಂದ ಮಹತ್ವದ ಆದೇಶ**

» **ತುರ್ತು ಪರಿಸ್ಥಿತಿ, ಸಂವಿಧಾನ ಅಮಾನತು ಅಪರಾಧಕ್ಕೆ ಶಿಕ್ಷೆ**

ತೀರ್ಪು ಪ್ರಕಟಿಸಿದ ಪೇಷಾವರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಕಾರ್ ಅಹಮದ್ ಸೇಠ್ ನೇತೃತ್ವದ ಪೀಠದಲ್ಲಿ ಸಿಂಧ್ ಹೈಕೋರ್ಟ್‌ನ ನಜರ್ ಅಕ್ಬರ್ ಮತ್ತು ಲಾಹೋರ್ ಹೈಕೋರ್ಟ್‌ನ ಶಾಹಿದ್ ಕರೀಂ ಇದ್ದರು. ಪ್ರಕರಣದ ವಿಚಾರಣೆ ಪೂರ್ಣಗೊಳಿಸಿದ್ದ ಪೀಠ, ನ.19ರಂದು ತೀರ್ಪು ಕಾದಿರಿಸಿತ್ತು. 2-1 ಬಹುಮತದ ತೀರ್ಪು ಇದಾಗಿದೆ.

**ಕಾರ್ಗಿಲ್ ಕದನ ಕಾವು:** 1998ರಲ್ಲಿ ಪಾಕ್ ಸೇನೆಯ ಮುಖ್ಯಸ್ಥರಾಗಿ ಮುಷರಫ್ ನೇಮಕಗೊಂಡರು. ಇದಾದ ಒಂದು ವರ್ಷದಲ್ಲೇ ಕಾರ್ಗಿಲ್ ಕದನ ನಡೆಯಿತು.

» ಪುಟ 2



## ಮುಂದೇನು?

- ಮುಷರಫ್‌ಗೆ ನೀಡಿರುವ ಗಲ್ಲು ಶಿಕ್ಷೆ ತೀರ್ಪನ್ನು ಪ್ರಶ್ನಿಸುವುದಾಗಿ ಅವರ ಎಪಿಎಂಎಲ್ ಪಕ್ಷ ಸ್ಪಷ್ಟಪಡಿಸಿದೆ. ಹೀಗಾಗಿ ಪ್ರಕರಣ ಉನ್ನತ ನ್ಯಾಯಾಲಯದ ಮೆಟ್ಟಿಲೇರಲಿದೆ.
- ವಿಶೇಷ ಕೋರ್ಟ್ ತೀರ್ಪನ್ನು ಮೇಲಿನ ನ್ಯಾಯಾಲಯ ಎತ್ತಿಹಿಡಿದಲ್ಲಿ ಕುಣಿಕೆಗೆ ಕೊರಳೊಡ್ಡುವುದು ಅನಿವಾರ್ಯ. ತೀರ್ಪಿನ ಬಳಿಕ ಮುಷರಫ್‌ರನ್ನು ಪಾಕ್‌ಗೆ ಕರೆತರಬೇಕು
- ಉನ್ನತ ನ್ಯಾಯಾಲಯ ಒಂದೊಮ್ಮೆ ಮರಣದಂಡನೆ ರದ್ದು ಪಡಿಸಿದಲ್ಲಿ ಮುಷರಫ್ ನಿರಾಳ


## ಪ್ರಮುಖ ಘಟನಾವಳಿಗಳು

- 2007 ಅ.6: ಅಧ್ಯಕ್ಷೀಯ ಚುನಾವಣೆಯಲ್ಲಿ ಪರ್ವೇಜ್ ಮುಷರಫ್ ಮರು ಆಯ್ಕೆ
- ನವೆಂಬರ್ 3: ತುರ್ತು ಪರಿಸ್ಥಿತಿ ಘೋಷಣೆ. ಕೆಲವು ನ್ಯಾಯಾಧೀಶರ ವಜಾ
- ನ.28: ಪಾಕಿಸ್ತಾನದ ಸೇನಾ ಮುಖ್ಯಸ್ಥ ಹುದ್ದೆಗೆ ರಾಜೀನಾಮೆ. ಐದು ವರ್ಷ ಅವಧಿಗೆ ಅಧ್ಯಕ್ಷನಾಗಿ ಪ್ರಮಾಣ ವಚನ
- 2019 ನ.19: ಗಂಭೀರ ದೇಶದ್ರೋಹ ಪ್ರಕರಣ ವಿಚಾರಣೆ ಮುಗಿಸಿದ ವಿಶೇಷ ನ್ಯಾಯಾಲಯ. ನ.28ಕ್ಕೆ ತೀರ್ಪು ಕಾದಿರಿಸಿದ ಕೋರ್ಟ್
- ನ.23: ತೀರ್ಪು ಕಾದಿರಿಸಿದ್ದನ್ನು ಪ್ರಶ್ನಿಸಿದ ಮುಷರಫ್
- ತೀರ್ಪು ಪ್ರಕಟಿಸದಂತೆ ಇಸ್ಲಾಮಾಬಾದ್ ಹೈಕೋರ್ಟ್‌ನಿಂದ ತಡೆಯಾಜ್ಞೆ
- ಡಿ.5: ಡಿ.17ರಂದು ತೀರ್ಪು ಪ್ರಕಟಿಸುವುದಾಗಿ ವಿಶೇಷ ಕೋರ್ಟ್ ಹೇಳಿಕೆ
- ಡಿ.17: ಮರಣ ದಂಡನೆ ವಿಧಿಸಿ ಮಹತ್ವದ ತೀರ್ಪು ಕೊಟ್ಟ ನ್ಯಾಯಾಲಯ

## ದೇಶದ್ರೋಹ ಆರೋಪ

2007ರ ನವೆಂಬರ್‌ನಲ್ಲಿ ಮುಷರಫ್ ವಿರುದ್ಧ ದೇಶದ್ರೋಹದ ಮೊಕದ್ದಮೆ ದಾಖಲಿಸಿ ವಿಚಾರಣೆ ನಡೆಸಲಾಗಿತ್ತು. ತನ್ನ ಆಡಳಿತ ಅವಧಿ ವಿಸ್ತರಿಸಿಕೊಳ್ಳಲು ತುರ್ತು ಪರಿಸ್ಥಿತಿ ಹೇರಿ ಸಂವಿಧಾನವನ್ನು ಅಮಾನತಿನಲ್ಲಿಟ್ಟಿದ್ದರು. ತುರ್ತು ಪರಿಸ್ಥಿತಿ ಹೇರಿಕೆ ಮತ್ತು ಸಂವಿಧಾನ ಅಮಾನತಿನಲ್ಲಿಡುವುದು ಪಾಕ್ ಸಂವಿಧಾನದ ಪ್ರಕಾರ ಶಿಕ್ಷಾರ್ಹ ಅಪರಾಧ. ಇದಕ್ಕಾಗಿ ಮುಷರಫ್‌ಗೆ 2014ರಲ್ಲಿ ಛೀಮಾರಿ ಹಾಕಲಾಗಿತ್ತು. ಮುಷರಫ್‌ರ ಎರಡೂ ಕ್ರಮದ ವಿರುದ್ಧ ಭಾರಿ ಪ್ರತಿಭಟನೆ ಭುಗಿಲೆದ್ದಿತ್ತು. ಸಂಸತ್ತಿನಲ್ಲಿ ವಾಗ್ದಂಡನೆ ಭೀತಿಯಿಂದ ಪಾರಾಗಲು ಅವರು 2008ರಲ್ಲಿ ಪದತ್ಯಾಗ ಮಾಡಿದ್ದರು. ಹಲವು ಬಾರಿ ಆದೇಶಿಸಿದ್ದರೂ ಕೋರ್ಟ್ ಮುಂದೆ ಹಾಜರಾಗಲು ನಿರಾಕರಿಸಿದ್ದರು. ಎರಡು ಸಲ ಮಾತ್ರ ವಿಚಾರಣೆಗೆ ಹಾಜರಾಗಿದ್ದಾರೆ.

## ಅಪರಾಧ ಪರಂಪರೆ



ಜರ್ದಾರಿ

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಆಡಳಿತ ನಡೆಸುವವರು ಅಥವಾ ನಡೆಸಿದವರು ಭ್ರಷ್ಟಾಚಾರದಂಥ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಶಿಕ್ಷೆ ಅನುಭವಿಸುವುದು ಸರ್ವೇಸಾಮಾನ್ಯ. ಪಾಕ್‌ನ ಮಾಜಿ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಸುಳ್ಳು ಬ್ಯಾಂಕ್ ಖಾತೆ ಪ್ರಕರಣದಲ್ಲಿ ಬಂಧನಕ್ಕೀಡಾಗಿದ್ದರು. ಮಾಜಿ ಪ್ರಧಾನಿ ನವಾಜ್ ಷರೀಫ್ ಕೂಡ ಭ್ರಷ್ಟಾಚಾರ ಪ್ರಕರಣದಲ್ಲಿ ಸೆರೆವಾಸ ಅನುಭವಿಸಿದ್ದಾರೆ.

## ಮಹತ್ವದ ತೀರ್ಪು

ಪಾಕ್‌ನಲ್ಲಿ ಯಾವಾಗಲೂ ಸೇನೆಯೇ ಆಡಳಿತದ ಮೇಲೆ ಬಿಗಿ ಹಿಡಿತ ಸಾಧಿಸಿ ಅದುವೇ ಮೇಲುಗೈ ಪಡೆದಿರುತ್ತದೆ. ಇಂಥ ಇತಿಹಾಸ ಇರುವ ಪಾಕಿಸ್ತಾನದಲ್ಲಿ ಸೇನೆಯ ಮಾಜಿ ಮುಖ್ಯಸ್ಥರೊಬ್ಬರಿಗೆ 2014ರಲ್ಲಿ ಛೀಮಾರಿ ಹಾಕಿದ್ದೇ ಮಹತ್ವದ ವಿದ್ಯಮಾನವಾಗಿತ್ತು. ಈ ರೀತಿಯ ಆರೋಪ ಎದುರಿಸಿದ ಪ್ರಥಮ ಸೇನಾ ಮುಖ್ಯಸ್ಥ ಅವರಾಗಿದ್ದಾರೆ.